**ದಿಃ30.06.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 15 ಪ್ರತಿವಾದಿ ಪರ ಶ್ರೀ.ಎಂ.ಆರ್.ಜೆ ವಕೀಲರಿಂದ ಃ**

9. ನಮ್ಮ ಆಯಟ್ಟೀರಾ ಕಟುಂಬದಲ್ಲಿ 10 ಭಾಗಗಳಿವೆ. 10 ಭಾಗಗಳು ಯಾರು ಯಾರು ಇವೆ. ಅವುಗಳೆಂದರೆ 1.ಚಂಗಪ್ಪ 2.ಬೆಳ್ಳಿಯಪ್ಪ, 3.ಕಾರ್ಯಪ್ಪ 4.ತಿಮ್ಮಯ್ಯ 5.ಲೊಕೇಶ 6.ಹೊನ್ನಪ್ಪ 7.ಚಂದ್ರಶೇಕರ, 8.ಭರತ್ 9.ನಂಜಪ್ಪ ಮತ್ತು 10.ಕುಂಜಣ್ಣ. ಕುಂಜಣ್ಣ ಇವರಿಗೆ ಕುಜ್ಜಪ್ಪ ಎಂಬ ಹೆಸರಿತ್ತು ಎಂದರೆ ಸರಿಯಲ್ಲ. ನಮ್ಮ ಆಯಟ್ಟೀರಾ ಕುಟುಂಬಕ್ಕೆ ಮರಂದೋಡಾ ಗ್ರಾಮದಲ್ಲಿ ಒಟ್ಟು 17.84 ಎಕರೆ ಇದೆ. ದಾವಾದಲ್ಲಿ ಕಾಣಿಸಿರುವ ಆಸ್ತಿಗಳಲ್ಲಿ ಆಯಟ್ಟೀರಾ ಕಟುಂಬದ ಎಲ್ಲಾ ಸದಸ್ಯರು ವಾಸ ಇದ್ದಾರೆ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ರ ಆರ್.ಟಿ.ಸಿ ಗಳಲ್ಲಿ ನಮೂದಾಗಿರುವ ಹೆಸರಿನವರಿಗೆ ಸದರಿ ಆಸ್ತಿಗಳಲ್ಲಿ ಹಕ್ಕು ಇದ್ದು ಅವರು ಸದರಿ ಜಮೀನಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. 1958 ರ ಜಮಾಂಬಂದಿಯಲ್ಲಿ ಕುಜ್ಜಣ್ಣ ಇವರ ಹೆಸರು ಕಂಡು ಬರುತ್ತಿದೆ ಎಂದರೆ ಸಾಕ್ಷಿ ನಂಜಪ್ಪ ನಬವರ ಮಗ ಕುಜ್ಜಣ್ಣ ಎಂಬುದನ್ನು ನಾನು ಸಹ ಓದಿದ್ದೇನೆ. ಕುಜ್ಜಣ್ಣ ಇವರು ನಿಮಗೆ ಹೇಗೆ ಸಂಬಂಧ ಎಂಬುದರ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಅವರೂ ಸಹ ನಮ್ಮ ಕಟುಂಬದವರು ಅವರಿಗೂ ಸಹ ಭಾಗ ಇದೆ ಎನ್ನುತ್ತಾರೆ. ಕುಜ್ಜಣ್ಣ ಇವರು ಜೀವಂತ ಇಲ್ಲ. ಕುಜ್ಜಣ್ಣ ಇವರ ವಾರಸುದಾರರು ಯಾರು ಎಂದರೆ ಸಾಕ್ಷಿ ಅವರ ಮಗ ಅಪ್ಪಚ್ಚ ಎಂಬುವವರು ಇದ್ದಾರೆ ಎನ್ನುತ್ತಾರೆ. ಕುಜ್ಜಣ್ಣ ಇವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಗಂಡು ಮಕ್ಕಳು ಎನ್ನುತ್ತಾರೆ. ಕುಜ್ಜಣ್ಣ ನ ಇನ್ನೊಬ್ಬ ಮಗನ ಹೆಸರು ಗೊತ್ತಿಲ್ಲ. ಕುಜ್ಜಣ್ಣ ಇವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

10. ಆಯಟ್ಟೀರಾ ಅಪ್ಪಚ್ಚ ಜೀವಂತ ಇಲ್ಲ. ಆಯಟ್ಟೀರಾ ಅಪ್ಪಚ್ಚ ಇವರಿಗೆ ಇಬ್ಬರು ಮಕ್ಕಳು ಆದರೆ ಅವರ ಹೆಸರು ಗೊತ್ತಿಲ್ಲ. 11, 14 ಮತ್ತು 15ನೇ ಪ್ರತಿವಾದಿಗಳು ನಿಮಗೆ ಹೇಗೆ ಸಂಬಂಧ ಎಂದರೆ ಸಾಕ್ಷಿ ಅವರು ನಮ್ಮ ಕುಟುಬಂದವರು ಅಷ್ಟೇ ಹೊರೆತು ನಮ್ಮ ಭಾಗಕ್ಕೆ ಸೇರಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಕಾಣಿಸಿರುವ ಆಸ್ತಿಗಳಲ್ಲಿ 11, 14 ಮತ್ತು 15ನೇ ಪ್ರತಿವಾದಿಗಳು ಸಹ ಹಿಸ್ಸಾ ಹಕ್ಕು ಇದೆ ಎಂದರೆ ಸಾಕ್ಷಿ ನಮ್ಮ ಭಾಗದ ಆಸ್ತಿಗಳಲ್ಲಿ ಅವರಿಗೆ ಹಕ್ಕಿಲ್ಲ ಆದರೆ, ಬೇರೆ ಆಸ್ತಿ ಇದೆ ಎನ್ನುತ್ತಾರೆ. 11, 14 ಮತ್ತು 15ನೇ ಪ್ರತಿವಾದಿಗಳಿಗೆ ಎಷ್ಟು ಆಸ್ತಿ ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಿಪಿ.1 ಮತ್ತು 2 ರಲ್ಲಿ 11, 14 ಮತ್ತು 15ನೇ ಪ್ರತಿವಾದಿಗಳ ಹೆಸರು ಉಲ್ಲೇಖ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಹೆಸರು ಹೇಗೆ ಸೇರಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ಮತ್ತು 2 ರಲ್ಲಿ ಇರುವ ಆಸ್ತಿಗಳು ಆಯಟ್ಟೀರಾ ಕುಟುಂಬಕ್ಕೆ ಸೇರಿದ್ದು ಆಗಿರುವುದರಿಂದ 11, 14 ಮತ್ತು 15ನೇ ಪ್ರತಿವಾದಿಗಳು ಹಾಗೂ ಉಳಿದ ಕಟುಂಬದವರು ಹೆಸರು ಆರ್.ಟಿ.ಸಿ ಗಳಲ್ಲಿ ಬಂದಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆಯಟ್ಟೀರಾ ಕುಟುಂಬದ ವಂಶ ವೃಕ್ಷವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ಯಾರಿಗೆ ಏನು ಸಂಬಂಧ ಎಂದು ತಿಳಿಯುತ್ತದೆ ಎಂದರೆ ಸಾಕ್ಷಿ ಒಂದು ಭಾಗದ ವಂಶ ವೃಕ್ಷವನ್ನು ಕೊಟ್ಟಿದ್ದೇನೆ ಬೇರೆ ಕುಟುಂಬದ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಗಂಡನಿಗೆ ಸೇರಿದ 3 ಎಕರೆ ಆಸ್ತಿಯನ್ನು 15ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸೇರಿದ ಆಸ್ತಿಯನ್ನು 15ನೇ ಪ್ರತಿವಾದಿ ಮತ್ತು ಇತರಿಗೆ ಮಾರಾಟ ಮಾಡಿ ಮಸಗೋಡು ಗ್ರಾಮದಲ್ಲಿ ವಾಸ ಇದ್ದೇವೆ ಎಂದರೆ ಸಾಕ್ಷಿ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಆದರೆ ಮಸಗೋಡಿನಲ್ಲಿ ವಾಸ ಇದ್ದೇವೆ ಎನ್ನುತ್ತಾರೆ. ಮಸಗೋಡಿನಲ್ಲಿ ಬಂದಿದ್ದ

ಕುಟುಂಬದ ಆಸ್ತಿಯನ್ನು ಸಹ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆಯಟ್ಟೀರಾ ಕುಟುಂಬದ ಎಲ್ಲಾ ಸದಸ್ಯರುಗಳನ್ನು ಪಕ್ಷಗಾರನ್ನಾಗಿ ಮಾಡದೆ ಮಸಗೋಡು ಮತ್ತು ಒಳಗುಂದ ಗ್ರಾಮದಲ್ಲಿ ಇದ್ದ ಮಾರಾಟ ಮಾಡಿದ ಆಸ್ತಿಗಳನ್ನು ಸೇರಿಸದೆ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ 29 ನೇ ಪ್ರತಿವಾದಿ ಪರ ಪಿ.ಯು.ಪಿ ವಕೀಲರಿಂದ ಃ</u>**

15 ನೇ ಪ್ರತಿವಾದಿ ಪರ ಮಾಡಲಾದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಪಾಟಿ ಸವಾಲುಃ ಉಳಿದ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರ ಹಾಜರಿದ್ದು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.